ಶ್ರೀ ಗೋವಿಂದಗೌಡ.—ಈ ಕಾಡುಪ್ರಾಣಿಗಳಿಂದ ಯಾರು ನಷ್ಟ ಹೊಂದುತ್ತಾರೆ, ಅಂತಹವರಿಗೆ ಪರಿಹಾರಧನ ಕೊಡುವ ಅಧಿಕಾರವನ್ನು ಡಿವಿಜನಲ್ ಫಾರೆಸ್ಟ್ ಆಫೀಸರ್ ಅವರಿಗೆ ಕೊಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಈಗಾಗಲೇ ಇದಕ್ಕೆ ಸಂಬಂಧಪಟ್ಟ ಸರ್ಕಾರಿ ಆಜ್ಞೆಯನ್ನು ಹೊರಡಿಸಿದೆ.

ಶ್ರೀ ಕೆ. ವಸಂತ ಬಂಗೇರ —ಆನೆಗಳನ್ನು ಗುಂಡಿಟ್ಟು ಕೊಲ್ಲಬಾರದೆಂದು ಹೇಳಿದರು. ನೀರೆ ರೀತಿಯಿಂದ ಕೊಲ್ಲುವುದಕ್ಕೆ ತಾವು ಅನುಮತಿ ಕೊಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಯಾವ ರೀತಿಯಿಂದ ಕೊಂದರೂ ತಪ್ಪಾಗುತ್ತದೆ.

ಕಳಸ–ಹೊರನಾಡು ನಡುವೆ ಭದ್ರಾ ನದಿಗೆ ಸೇತುವೆ ಕಟ್ಟುವ ಬಗ್ಗೆ

೭೩೩. ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಕಳಸ–ಹೊರನಾಡು ಸಂಪರ್ಕಕ್ಕೆ ಭದ್ರಾ ಸೇತುವೆಯ ಅಂದಾಜು ಪಟ್ಟಿ ತಯಾರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

(ಆ) ಸೇತುವೆ ನಿರ್ಮಾಣ ಕಾರ್ಯವನ್ನು ಈವರೆಗೆ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಸದರಿ ಕೆಲಸಕ್ಕೆ ೧೯೮೨–೮೩ರಲ್ಲಿ ರೂ. ೨೨.೩೫ ಲಕ್ಷ ರೂ.ಗಳ ಅಂದಾಜು ತಯಾರಿಸಲಾಗಿದೆ.

(ಆ) ಭದ್ರಾ ಮೇಲ್ದಂಡೆ ಯೋಜನೆಯು ಈ ಸೇತುವೆಯ ಮಟ್ಟದ ಮೇಲೆ ಪರಿಣಾಮ ಹೊಂದಿರುವ ಕಾರಣ, ಸೇತುವೆಯ ಮಟ್ಟವನ್ನು ಪುನರ್ಪರಿಸಬೇಕು. ಆದ್ದರಿಂದ ಈ ಕೆಲಸವನ್ನು ಇನ್ನೂ ತೆಗೆದುಕೊಂಡಿಲ್ಲ.

MR. SPEAKER.—As a Minister I had laid the foundation stone.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇದನ್ನು ಪೂರ್ಣವಾಗಿ ಪರಿಶೀಲನೆ ಮಾಡಿದ್ದೇನೆ. ತಾವು ಶಂಕುಸ್ಥಾಪನೆ ಮಾಡಿದ ಮೇಲೆ ೧೯೮೨ರಲ್ಲಿ ಪುನರ್ ಪರಿಶೀಲನೆ ಮಾಡಬೇಕೆಂದು ಸರ್ಕಾರ ಆದೇಶ ಕೊಟ್ಟಿದೆ. ತಾವು ಸೂಚನೆ ಕೊಟ್ಟಮೇಲೆ ರೆಕಾರ್ಡ್ ವೆರಿಫೈ ಮಾಡಿದ್ದೇನೆ. ಆಪ್ಪರ್ ಭದ್ರಾಕ್ಕೆ ಟೆಕ್ನಿಕಲ್ ಫೀಸಿಬಿಲಿಟಿ ಫೈನಾನ್ಸಿಯಲ್ ಫೀಸಿಬಿಲಿಟಿ ನೋಡಬೇಕಾಗಿದೆ. I am not prepared to say anything about that. ಪ್ರಪೋಸ್ಡ್ ಪ್ರಾಜೆಕ್ಟ್‌ಗಳನ್ನು ಲೆಕ್ಕದಲ್ಲಿಟ್ಟುಕೊಂಡಿದ್ದೇವೆ, ಈ ಸೇತುವೆಯನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇನೆ. ಈ ವರ್ಷ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

ತುಂಗಾ ಏತ ನೀರಾವರಿ ಯೋಜನೆ

೭೩೪. ಶ್ರೀ ಎಂ. ಆನಂದರಾವ (ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ತುಂಗಾ ಏತ ನೀರಾವರಿ ಯೋಜನೆ ಬಗ್ಗೆ ಸರ್ಕಾರದವರು ಕೈಕೊಂಡಿರುವ ಕ್ರಮವೇನು

(ಆ) ಈ ಯೋಜನೆಯಿಂದ ಪ್ರಯೋಜನ ಹೊಂದುವ ಜಮೀನಿನ ವಿಸ್ತೀರ್ಣವೆಷ್ಟು ?

(ಇ) ಈ ಯೋಜನೆಯನ್ನು ಕೈಗೊಳ್ಳದಿರಲು ಮೂಲ ಕಾರಣಗಳಾದರೂ ಏನು ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).

(ಅ) ಸವಿಸ್ತಾರ ಅನ್ವೇಷಣೆಯನ್ನು ಕೈಗೊಳ್ಳಲಾಗಿದೆ.

(ಆ) ಸುಮಾರು ೫೪,೦೦೦ ಎಕರೆಗಳು.

(ಇ) ಸವಿಸ್ತಾರ ಅನ್ವೇಷಣೆ ಇನ್ನೂ ಮುಗಿದಿಲ್ಲ

ಶ್ರೀ ಎಂ. ಆನಂದರಾವ್.—ನಿನ್ನೆ ನಾನು ಲೋಕೋಪಯೋಗಿ ಇಲಾಖೆ ಬೇಡಿಕೆಗಳ ಮೇಲೆ ಮಾತನಾಡುವಾಗಲೂ ಸಹ ಇದೇ ವಿಚಾರವನ್ನು ಹೇಳಿದ್ದೆ. ಕಳೆದ ಹತ್ತು ವರ್ಷಗಳಿಂದ ಈ ಬೇಡಿಕೆ ಸರ್ಕಾರದ ಮುಂದಿದ್ದರೂ ಸಹ ಸರ್ವೀಸ್ಸಾರ ಅನ್ವೇಷಣೆ ಇನ್ನೂ ಮುಗಿದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಈ ಯೋಜನೆ ಕಾರ್ಯಗತವಾದರೆ ೫೨ ಹಳ್ಳಿಗಳಿಗೆ ಪ್ರಯೋಜನ ಸಿಗುತ್ತದೆ. ಈ ಹಳ್ಳಿಗಳ ರೈತರ ಒಂದು ನಿಯೋಗ ಇಪ್ಪರಲ್ಲಿಯೇ ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಲು ನಿರ್ಧಾರ ಮಾಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಆದಷ್ಟೂ ಬೇಗ ಕೈಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಚ್. ಡಿ ದೇವೇಗೌಡ.—ಗಾಜನೂರು, ಬೈರಂಪುರ ಹಾಗೂ ಶಿಂಷಾದ ಬಳಿ ಮೂರು ಲಿಫ್ಟ್ ಇರಿಗೇಷನ್‌ಗಳನ್ನು ಕೈಕೊಂಡರೆ ಸುಮಾರು ೩ ಲಕ್ಷದ ೨೦ ಸಾವಿರ ಎಕರೆಗೆ ನೀರು ಕೊಡ ಬಹುದೆಂದು ಪ್ರಿಲಿಮಿನರಿ ಲೈನ್ಸ್ ಎಸ್ಟಿಮೇಟ್ ಮೂಲಕ ತಿಳಿದಂಬಂದಿದೆ. ರಾಯಚೂರು, ಶಿವಮೊಗ್ಗ ಹಾಗೂ ಧಾರವಾಡದ ರೈತರಿಗೆ ಇದರಿಂದ ಅನುಕೂಲವಾಗುತ್ತದೆ. ಗಾಜನೂರು ಲಿಫ್ಟ್ ಇರಿಗೇಷನ್ ಬಗ್ಗೆ ಎಸ್ಟಿಮೇಟ್ ಮಾಡಿದ್ದಾರೆ. ಪ್ರಿಲಿಮಿನರಿ ಎಸ್ಟಿಮೇಟ್ ಪ್ರಕಾರ ೫೪ ಸಾವಿರ ಎಕರೆಗೆ ನೀರು ಸಿಗುತ್ತದೆ. ಮೇಲ್ಭಾಗದಲ್ಲಿ ಒಂದು ಅಣೆಕಟ್ಟು ಕಟ್ಟಿ ಫ್ಲೋ ಇರಿಗೇಷನ್ ಮಾಡುವುದು ಒಳ್ಳೆಯದೆಂಬ ಅಭಿಪ್ರಾಯ ಕೂಡ ಇದೆ. ಇದರಿಂದ ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಯ ೨.೩ ಲಕ್ಷ ಎಕರೆಗೆ ನೀರಿನ ಸೌಲಭ್ಯ ದೊರೆಯುತ್ತದೆ. ಆದರೆ ಇದರಿಂದ ೨೦ ಸಾವಿರ ಎಕರೆ ಭೂಮಿ ಮುಳುಗಡೆಯಾಗುತ್ತದೆಂಬ ಅಭಿಪ್ರಾಯ ಕೂಡ ಇದೆ. ಇದು ನಮ್ಮ ಮಾಸ್ಟರ್ ಪ್ಲಾನ್‌ನಲ್ಲಿ ಬರುತ್ತದೆ. ಕೃಷ್ಣಾ ಅವಾರ್ಡ್‌ನ ಮಾಸ್ಟರ್ ಪ್ಲಾನ್‌ನಲ್ಲಿ ಹೆಚ್ಚು ನೀರನ್ನು ಉಪಯೋಗ ಮಾಡಿ ಕೊಳ್ಳಲು ನಮಗೆ ಅವಕಾಶವಿದೆ. ಈಗ ಅಪ್ಪರ್-ತುಂಗಾ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಲು ಸೂಚನೆ ಕೊಟ್ಟಿದ್ದೇವೆ. ಅದು ಆದಮೇಲೆ ಇನ್‌ವೆಸ್ಟಿಗೇಷನ್ ಮಾಡಲಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆ ಅನ್ವಯ ಸಾಧಿಸಿದ ತಾಲ್ಲೂಕುವಾರು ಪ್ರಗತಿ ವಿವರ ಕುರಿತು.

೯೫೪ ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ (ಸಾಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮತ್ತು ರೇಷ್ಮೆ ಇಲಾಖೆಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆಯ ಅನ್ವಯ ೧೯೮೨ ಮತ್ತು ೧೯೮೩ನೇ ಸಾಲುಗಳ ಅಂತ್ಯಕ್ಕೆ ಸಾಧಿಸಿದ ತಾಲ್ಲೂಕುವಾರು ಪ್ರಗತಿಯ ವಿವರಗಳನ್ನೊದಗಿಸುವುದು?

ಆ) ಸದರಿ ಯೋಜನೆಯನ್ವಯ ಎಷ್ಟು ಹರಿಜನರಿಗೆ ನೀರಾವರಿ ಉದ್ದೇಶಕ್ಕಾಗಿ ಸಹಾಯ ನೀಡಿಸಲಾಗಿದೆ? (ಪ್ರಗತಿಯ ವಿವಿಧ ಹಂತದ ತಾಲ್ಲೂಕುವಾರು ವಿವರಗಳನ್ನೊದಗಿಸಬೇಕಾಗಿ ವಿನಂತಿ)

ಶ್ರೀಮತಿ ಚಂದ್ರುಪ್ರಭಾ ಅರಸ್ (ಸಮಾಜ ಕಲ್ಯಾಣ ಮತ್ತು ರೇಷ್ಮೆ ಇಲಾಖೆ).—

ಅ) ವಿಶೇಷ ಘಟಕ ಯೋಜನೆಯ ಅನ್ವಯ ಶಿವಮೊಗ್ಗ ಜಿಲ್ಲೆಯಲ್ಲಿ ೧೯೮೨ ಮತ್ತು ೧೯೮೩ನೇ ಸಾಲುಗಳ ಅಂತ್ಯದವರೆಗೆ ಸಾಧಿಸಿದ ಆರ್ಥಿಕ ಪ್ರಗತಿ ಮತ್ತು ಪ್ರಯೋಜನ ಪಡೆದ ಕುಟುಂಬಗಳ ವಿವರಣೆಯನ್ನು ಈ ಕೆಳಗೆ ಕೊಡಲಾಗಿದೆ.